ಶ್ರೀ ಜಿ.ಎಚ್. ಆನ್ವಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಕಾನೂನು ಬಿಟ್ಟು ಹರಾಜು ಮಾಡುವುದಕ್ಕಾಗುವುದಿಲ್ಲ. ಆ ರೀತಿ ಏನಾದರೂ ಅನ್ಯಾಯವಾಗಿದ್ದರೆ ಮಾನ್ಯ ಸದಸ್ಯರು ಮಾಹಿತಿ ಕೊಟ್ಟರೆ ತನಿಖೆ ಮಾಡಿಸುತ್ತೇನೆ.

Recruitment of Co-operative Employees in the State

551 SRI P. RAMDEV (Malleswaram).—Will the Minister for Ceration be pleased to state:—

(a) the norms framed by the Government for recruitment of staff of Co-operative Societies in the State;

(b) whether it has come to the notice of the Government that many of the Co-operative Societies particularly Societies in Bangalore are not following the norms;

(c) if so, the action taken against these Co-operative Societie for having made recruitment of staff voilating the norms?

SRI H.C. SRIKANTAIAH (Minister for Co-operation).—

(a) norms have been framed under section 128 (a) of the Co-operative Act, 1959 read with rule 17 of the Co-operative Societies, Rules, 1960 based on the requirements of the various Co-operative Societies. Besides instructions have been issued to the Co-operative Societies which are in receipt of financial assistance from Government to follow the reservation order while making recruitments.

1.	Scheduled Castes	15%
2.	Scheduled Tribes	3%
3.	Other Backward Classes, viz.,	
	1. Backward Communities	: 18%
	2. Backward Castes	: 10%
	3. Backward Tribes	: 5%
	4. Special Group	: 5%
	5. Physically handicapped	: 2%

(b) Yes.

(c) Government will take action against the Co-operative Societies where appointments have been made violating the norms.

ಶ್ರೀ ಪಿ. ರಾಂದೇವ್.—ನಮ್ಮ ರಾಜ್ಯದಲ್ಲಿರತಕ್ಕ ಸಹಕಾರ ಕ್ಷೇತ್ರದಲ್ಲಿ ನೇಮಕಗೊಂಡಿರತಕ್ಕ ಸಿಬ್ಬಂದಿ ಸಂಖ್ಯೆ ಎಷ್ಟು? ಅದರಲ್ಲಿ ಪರಿಶಿಷ್ಟ ಜಾತಿ ಪುತ್ತು ಹಿಂದುಳಿದ ವರ್ಗಕ್ಕೆ ಸೇರಿದವರು ಎಷ್ಟು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ವಿವರವಾಗಿ ಉತ್ತರಿಸುತ್ತೇನೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಕೇಳುತ್ತಿರುವುದರಿಂದ ಅದಕ್ಕೆ ವಿವರವಾಗಿ ಉತ್ತರಿಸತಕ್ಕದ್ದು ಸರ್ಕಾರದ ಕರ್ತವ್ಯ.

ಶ್ರೀ ಪಿ. ರಾಮ್‌ದೇವ್.—ಹಾಗಿದ್ದಲ್ಲಿ. ನನ್ನ (ಅ) ಪ್ರಶ್ನೆಗೆ ಸೂತ್ರಗಳನ್ನು ರೂಪಿಸಿರುವುದಾಗಿ ತಾವೇನು ಉತ್ತರಿಸಿದ್ದೀರಿ–ಆ ಸೂತ್ರಗಳು ಯಾವುವು ಮತ್ತು ಅವುಗಳನ್ನು ಯಾವಾಗ ರಚನೆ ಮಾಡಲಾಯಿತು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ರಿಜಿಸ್ಟ್ರಾರ್‌ರವರು ಏನು ಒಂದು ಕೇಡರ್ ಸ್ಟ್ರೆಂಗ್ತ್ ಅನ್ನು ಸಂಬಂಧಪಟ್ಟ ಸಹಕಾರ ಸಂಘಗಳಿಗೆ ರೂಪಿಸಿರುತ್ತಾರೆ ಅಷ್ಟನ್ನು ನೇಮಕ ಮಾಡಬೇಕು; ಹಾಗೆ ನೇಮಕಾತಿ ಮಾಡುವಾಗ ರಿಸರ್ವೇಷನ್ ಸೂತ್ರ ಏನಿದೆ ಅದನ್ನು ಅನುಸರಿಸಬೇಕು.

SRI C. M. ARUMUGHAM.—Did the Government call for a periodical report from the Registrar of Co-operative Societies as to whether these societies are following the reservation?

SRI H. C. SRIKANTAIAH.—Yes, Sir. I am going to call for it.

SRI C. M ARUMUGHAM.—Whether there is a periodical report from the Registrar? How did the Government come to know that these societies are following the reservation? When did the Government call for the report last?

SRI H. C. SRIKANTAIAH.—I am going to call for it as early as possible. Now, the figures are not with me.

SRI C M. ARUMUGHAM —So far under the rules laid down you have not called for any report from the Registrar. Therefore, has it come to the notice of the Government that these societies are not following the reservation?

SRI H. C. SRIKANTAIAH.—Government, of course, has given definite instructions to all the societies to adopt the reservation policy. They cannot go out of the policy. If anybody violates the policy, action will be definitely taken and the appointments made by the society will be cancelled.

SRI C. M. ARUMUGHAM.—Has it come to the notice of the Government that the Apex Bank is not following the reservation and they have not recruited any SCs?

SRI H. C. SRIKANTAIAH.—It has not come to my notice. If the Hon'ble Member brings it to my notice, definitely I will taken action.

ಶ್ರೀ ಪಿ. ರಾಮ್‌ದೇವ್.—ನೇಮಕಾತಿ ಬಗ್ಗೆ ತಾವು ಹೊರಡಿಸಿರತಕ್ಕ ಆಜ್ಞೆಯನ್ನು ಉಲ್ಲಂಘಿಸಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ಹೇಳಿದ್ದೀರಿ. ಹಾಗಾದರೆ ಆ ಆಜ್ಞೆಯನ್ನು ಎಷ್ಟು ಜಲ್ಲಾ ಸಹಕಾರ ಬ್ಯಾಂಕುಗಳು ಉಲ್ಲಂಘಿಸಿವೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆಜ್ಞೆಯನ್ನು ಉಲ್ಲಂಘಿಸಿದ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ ಪರಿಶೀಲಿಸುವುದಾಗಿ ಹೇಳಿದ್ದೇವೆ. ಯಾವ ಬ್ಯಾಂಕುಗಳು ಆಜ್ಞೆಯನ್ನು ಉಲ್ಲಂಘಿಸಿಲ್ಲ.

ಶ್ರೀ ಪಿ. ರಾಮ್‌ದೇವ್.—ನನ್ನ (ಆ) ಪ್ರಶ್ನೆಯನ್ನು ನೋಡಿ, ಅದಕ್ಕೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಲ್ಲೇಶ್ವರಂ ಸಹಕಾರ ಬ್ಯಾಂಕು ಒಂದು ಮಾತ್ರ ಒಂದೇ ಒಂದು ಸಂದರ್ಭದಲ್ಲಿ ಆಜ್ಞೆಯನ್ನು ಉಲ್ಲಂಘನೆ ಮಾಡಿದಯಾದ್ದರಿಂದ ಆ ರೀತಿ ಹೇಳಿದ್ದೇವೆ. ಆದರ ಕಂಪ್ಲೈಯನ್ಸ್ ರಿಪೋರ್ಟ್ ಕೂಡ ಬರುತ್ತಿದೆ.

MR. SPEAKER –The question (b) does not relate to Malleshwaram. The question is "Whether it has come to the notice of the Government that many of the Co-operative Societies.... "and then the answer is 'Yes'. That is why they are asking.

SRI H. C. SRIKANTAIAH.—I thought it is particularly for the Malleshwaram Bank

SRI P. RAMDEV.—I am interested in all the societies.

SRI H. C. SRIKANTAIAH.—The State Land Development Bank had also violated and the Registrar has cancelled the entire appointment of the daily wages.

SRI P. RAMDEV.—What about the recent appointments made by the Apex Bank?

SRI H C. SRIKANTAIAH.—The Apex Bank has adhered to all the rules. The Registrar is there, the Secretary is there in the Committee. They have adopted 100% rules. If they have not adopted, please bring it to my notice and then action will be taken.

ಶ್ರೀ ಪಿ.ಪಿ. ಹೆಗಡೆ.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಿಂದ, ಸರ್ಕಾರ ಆಜ್ಞೆ ಹೊರಡಿಸಿದರೆ ಅದರ ಕೆಲಸ ಮುಗಿಯಿತು ಎಂಬುದು ಅಷ್ಟು ಮಾತ್ರ ಗೊತ್ತಾಗುತ್ತದೆ.

ಅಧ್ಯಕ್ಷರು.—(ಆ) ಪ್ರಶ್ನೆಗೆ ಉತ್ತರವಾಗಿ ಆಜ್ಞೆಯನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿವೆ ರೆ. ಆದರೆ ಎಷ್ಟು ಬ್ಯಾಂಕುಗಳು ಉಲ್ಲಂಘಿಸಿವೆ ಎಂಬ ಮಾಹಿತಿ ಬಹುಶಃ ಅವರ ಹತ್ತಿರ ಇರಲಿಕ್ಕಿಲ್ಲ.

ಶ್ರೀ ಪಿ ರಾಮದೇವ್.—ನಾವು ಆಜ್ಞೆಯನ್ನು ಹೊರಡಿಸಿದ್ದೇವೆ, ಆದನ್ನು ಉಲ್ಲಂಘಿಸಿದ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಏನು ಅರ್ಥ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಲ್ಲಿ ಮನವಿ ಏನೆಂದರೆ, ಈ ಸದನದ ಸದಸ್ಯರಿಗೆ ಗೊತ್ತಿರುವ ಹಾಗೆ ಹಿಂದಲ್ಲೋ ಇದು ಆಗಿದೆ. ಇತ್ತೀಚೆಗೆ ಮಾಡತಕ್ಕ ನೇಮಕಾತಿಗಳನ್ನು ಕಾನೂನು ಬದ್ಧವಾಗಿ ವಾಡುತ್ತಿದ್ದೇವೆ. ಯಾವ ನಿಯಮಗಳನ್ನು ಗಿಲ್ಲಗಳೆದು ಮಾಡುತ್ತಿಲ್ಲ. ಹಿಂದುಳಿದವರಿಗೆ ಹರಿಜನ-ಗಿರಿಜನರಿಗೆಲ್ಲ ಎಷ್ಟೆಷ್ಟು ಹುದ್ದೆಗಳನ್ನು ಕೊಡಬೇಕೋ ಅಷ್ಟನ್ನು ಕೊಡುತ್ತಿದ್ದೇವೆ.

ಶ್ರೀ ಪಿ. ರಾಮ್‌ದೇವ್.—ತಾವು ಈಗ ಹೇಳುತ್ತಿದ್ದೀರಿ, ಇತ್ತೀಚೆಗೆ ಕಾನೂನು ಪ್ರಕಾರ ಮಾಡುತ್ತಿದ್ದೇವೆ ಎಂದು. ಉತ್ತರದಲ್ಲಿ ಹೇಳಿದ್ದೀರಿ ಉಲ್ಲಂಘನೆಯಾಗಿದೆ ಎಂದು. ಇದಕ್ಕೆ ಕಾರಣವೇನು? ಈ ಸಂದರ್ಭದಲ್ಲಿ, ನನ್ನ ಸಲಹೆ ಏನೆಂದರೆ. ನಮ್ಮ ರಾಜ್ಯದಲ್ಲಿ ಸುಮಾರು ೨೬-೨೮ ಜಿಲ್ಲಾ ಸಹಕಾರ ಸಂಘಗಳು ಇವೆ, ಅವುಗಳಿಗೆ ಬೇಕಾದ ಹುದ್ದೆಗಳನ್ನು ಭರ್ತಿ ಮಾಡಲು ಪ್ರತಿಯೊಂದು ಸಹಕಾರ ಸಂಘಗಳಲ್ಲೂ ನೇಮಕಾತಿ ಸಮಿತಿಗಳನ್ನು ಏತಕ್ಕೆ ವಾಡಬಾರದು? ಮತ್ತು ಪ್ರತಿಯೊಂದರಲ್ಲೂ ಸಮಾಜ ಕಲ್ಯಾಣ ಇಲಾಖೆಯ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳನ್ನು ಏತಕ್ಕೆ ಹಾಕಬಾರದು? just to safeguard the interest of the SCs/STs and Backward Classes?

SRI H. C. SRIKANTAIAH.—I am realy going to adhere to this point. When Sri Ramdev is particular about the SCs/STs we are really happy. We are going to do it. ತಮಗೆ ಗೊತ್ತಿರುವ ಹಾಗೆ ನೇಮಕಾತಿ ಸಮಿತಿಗಳನ್ನು ಕೂಡ ಮಾಡಲಾಗಿದೆ. ಸರ್ಕಾರದ ಉನ್ನತ ಅಧಿಕಾರಿಗಳು ಅದರದಲ್ಲಿದ್ದಾರೆ. ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಹಕಾರ ಸಂಘಗಳಿಗೆ ಈ ರೀತಿ ಸಮಿತಿಗಳನ್ನು ಮಾಡಲಾಗಿದೆ. ಅವು ಅಡ್‌ವರ್ಟೈಸ್‌ಮೆಂಟ್ ಮಾಡಿ ಹುದ್ದೆಗಳನ್ನು ಕರೆದು ನೇಮಕಾತಿ ಮಾಡುವಾಗ ಎಲ್ಲ ಕಾನೂನುಗಳನ್ನು ಅನುಸರಿಸಿ ಮಾಡುತ್ತಿವೆ.

ಒಬ್ಬರು ಮಾನ್ಯ ಸದಸ್ಯರು.—ಪ್ರೈಮರಿ ಸೊಸೈಟಿಗಳಿಗೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ಇನ್ನು ಮಾಡಿಲ್ಲ. ೨ನೇ ದರ್ಜೆ ಗುಮಾಸ್ತರಿಂದ ಕೆಳ ಮಟ್ಟದ ನೌಕರರನ್ನು ನೇಮಿಸುವ ಇನ್ನೂ ಸಮಿತಿಗಳನ್ನು ಮಾಡಿಲ್ಲ. ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರ ಸಂಘಗಳಲ್ಲಿ ಮಾತ್ರ ಸಮಿತಿಗಳನ್ನು ಮಾಡಿದ್ದೇವೆ.

Constitution of Youth Service Board for Raichur District

672. SRI R. AMBANNA NAIK (Manvi)—Will the Minister of State for Information and Youth Services be pleased to state.—

(a) when the Raichur Youth Service Board was reconstituted, the number of times the meeting of the Board was convened since then, whether the Board meeting was convened regularly, the reasons for delay?

SRI GANGADHARA GOWDA (Minister of State for Information and Youth Services).—

(a) The Raichur Youth Service Board was reconstituted on 10-8-1978. The Board meeting was convened four times. The meeting could not be convened regularly due to certain inconveniences.

ಶ್ರೀ ಆರ್. ಅಂಬಣ್ಣನಾಯಕ್.—ರಾಯಚೂರು ಜಿಲ್ಲಾ ಯುವಜನ ಸೇವಾ ಮಂಡಲಿ ಪುನರ್ರಚನೆಯಾದದ್ದು ೧೫೭೮ರಲ್ಲಿ ಎಂದು ಹೇಳಿದ್ದೀರಿ. ಆದರೆ ಇದುವರೆಗೆ ಕೇವಲ ೪ ಸಭೆಗಳನ್ನು ಮಾತ್ರ ಕರೆದಿದ್ದು ಕೆಲವು ಅನಾನುಕೂಲತೆಗಳಿಂದ ಹೆಚ್ಚು ಭಾರಿ ಸಭೆ ಕರೆಯಲು ಸಾಧ್ಯವಾಗಿಲ್ಲವೆಂದು ಹೇಳಿದ್ದೀರಿ. ಅಂಥ ಅನಾನುಕೂಲತೆಗಳಾದರೂ ಏನು ? ೫ ವರ್ಷದ ಅವಧಿಯಲ್ಲಿ ಕೇವಲ ೪ ಸಭೆಗಳನ್ನು ಕರೆದಿರತಕ್ಕದು ಸಮಂಜಸವಲ್ಲ. ಇದಕ್ಕೆ ಕಾರಣವೇನು ?

ಶ್ರೀ ಗಂಗಾಧರ ಗೌಡ.—ಜಿಲ್ಲಾ ಯುವಜನ ಮಂಡಲಿಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಾಗಿರುತ್ತಾರೆ. ಅವರು ಸಭೆಯನ್ನು ಕರೆಯಬೇಕಾಗುತ್ತದೆ. ರಾಯಚೂರು ಜಿಲ್ಲಾ ಯುವಜನ ಮಂಡಲಿಯು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ತಿಳಿಸುತ್ತಿದ್ದಾರೆ. ಅದನ್ನು ಕೆಲಸ ಮಾಡುವಂತೆ ಮಾಡಲು ನಾವು ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ಕೊಡುತ್ತೇನೆ. ಮತ್ತೂ ಕೂಡ ಕೆಲಸ ಮಾಡದಿದ್ದರೆ ಮಂಡಲಿಯನ್ನು ವಿಸರ್ಜಿಸಿ ಮಾಡಿ ಮತ್ತೆ ಬೇರೆ ಮಂಡಲಿಯನ್ನು ರಚಿಸುತ್ತೇವೆ.

ಶ್ರೀ ಎಂ.ಬಿ. ಗಂಗಣ್ಣ.—ಆ ಜಿಲ್ಲಾ ಯುವಜನ ಸೇವಾ ಮಂಡಲಿಯು ಸದಸ್ಯ ನಾನು. ಎರಡು ತಿಂಗಳಿಗೊಮ್ಮೆ ಮೀಟಿಂಗ್ ಕರೆಯಬೇಕೆಂದು ಸರ್ಕಾರಿ ಆದೇಶ ಇದೆ. ಈ ವಿಚಾರವನ್ನು ನಾನು ಆ ಮಂಡಲಿಯ ಅಧ್ಯಕ್ಷರ ಗಮನಕ್ಕೆ ಸಹ ತಂದಿದ್ದೇನೆ. ಆದರೂ ಕೂಡ ಇಲ್ಲಿಯವರೆಗೆ ಅವರು ಸಭೆಯನ್ನು ಕರೆದಿರುವುದು ಕೇವಲ ೪ ಸಾರಿ. ಇದು ಅವರ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತದೆ. ಆದುದರಿಂದ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮ ಕೈಗೊಳ್ಳಬಾರದು ?

ಶ್ರೀ ಗಂಗಾಧರ ಗೌಡ.—ಜಿಲ್ಲಾಧಿಕಾರಿಗಳು ಹೇಳುತ್ತಾರೆ, ನಾವು ಮೀಟಿಂಗ್ ಕರೆದರೂ ಸದಸ್ಯರು ಸರಿಯಾಗಿ ಹಾಜರಾಗುತ್ತಿಲ್ಲ ಎಂದು. ಆದರೂ ಕೂಡ ಮತ್ತೆ ಜಿಲ್ಲಾಧಿಕಾರಿಗಳಿಗೆ ಹೊಸ ಆದೇಶ ನೀಡಿ ಸಮಯಕ್ಕೆ ಸರಿಯಾಗಿ ಮೀಟಿಂಗನ್ನು ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ.ಬಿ. ಗಂಗಣ್ಣ.—ಆ ಮಂಡಲಿ ಎಷ್ಟು ವರ್ಷ ಇರುತ್ತದೆ ಮತ್ತು ಅದನ್ನು ಪುನರ್ರಚಿಸಲಿಕ್ಕೆ ಸಾಧ್ಯತೆ ಇದೆಯೆ ? ಇದ್ದರೆ, ಅದನ್ನು ಪುನರ್ರಚಿಸುತ್ತೀರಾ ?

ಶ್ರೀ ಗಂಗಾಧರ ಗೌಡ.—ಆಯಿತು, ಪುನರ್ರಚಿಸುತ್ತೇವೆ.